ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-3, November-December 2025, Pp. 10-17
©*IIMRD*, Mysuru
IIMRD JOURNALS
www.iimrd.com

# ತಾಯಿ ಸಾಹೇಬ: ಒಂದು ಅಧ್ಯಯನ

**ಶಶಿಕಲ ಎ.ಎಸ್**

ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಸಾರಾಂಶ: (Abstract)**

*'ತಾಯಿ ಸಾಹೇಬ' (1997) ಸಿನಿಮಾವು ಕನ್ನಡ ಚಲನಚಿತ್ರ ಲೋಕಕ್ಕೆ ಅನೇಕ ಸ್ವರ್ಣ ಕಮಲ ಪ್ರಶಸ್ತಿ ಹಾಗೂ ರಾಷ್ಟ್ರ, ರಾಜ್ಯ ಪ್ರಶಸ್ತಿಗಳನ್ನು ತಂದುಕೊಟ್ಟ ಹೆಸರಾಂತ ನಿರ್ದೇಶಕ ಗಿರೀಶ್ ಕಾಸರವಳ್ಳಿ ಅವರ ನಿರ್ದೇಶನದಲ್ಲಿ ಮೂಡಿಬಂದ ಅತ್ಯುತ್ತಮ ಚಿತ್ರವಾಗಿದೆ. ಈ ಚಿತ್ರವು ರಾಷ್ಟ್ರ ಅಭಿಮಾನ, ಸ್ವಾತಂತ್ರ್ಯ ಹೋರಾಟ, ಗಾಂಧಿಯವರ ಚಳುವಳಿ, ಜಮೀನ್ದಾರ ಪದ್ಧತಿಗಳ ಜೊತೆಗೆ ಮಹಿಳೆಯರ ಸಮಸ್ಯೆಗಳನ್ನು ಹೊಸ ರೀತಿಯಲ್ಲಿ ಚಿತ್ರಿಸಿರುವ ಸಿನಿಮಾ ಇದಾಗಿದೆ. ತಾಯಿ ಸಾಹೇಬ ಸಿನಿಮಾವನ್ನು ರಂ.ಶಾ ಲೋಕಪುರ (ಪೂರ್ಣ ಹೆಸರು ರಂಗನಾಥ ಶಾಮಾಚಾರ್ಯ ಲೋಕಾಪುರ, ಜಮಖಂಡಿ ತಾಲೂಕು, ಹುನ್ನೂರು) ರವರು ಬರೆದಿರುವ ತಾಯಿ ಸಾಹೇಬ ಕಾದಂಬರಿ ಆಧಾರಿತ ಚಿತ್ರವಾಗಿದೆ. ಈ ಕಾದಂಬರಿ ರಚಿತವಾದ ಕಾಲ 1972. ಈ ಕಥೆಯಲ್ಲಿ ಬ್ರಿಟಿಷರ ಕಾಲದಲ್ಲಿ ನಿಷೇಧಗೊಂಡಿದ್ದ ದತ್ತಕದ ಬಗ್ಗೆ ಮಾಹಿತಿ ಇದೆ. ಬಹುಮುಖ್ಯವಾಗಿ ಈ ಚಿತ್ರವು ಮಹಿಳೆಯರ ಮಾನಸಿಕ ತುಮುಲಗಳನ್ನು ವಿಭಿನ್ನ ರೀತಿಯಲ್ಲಿ ಚಿತ್ರಿಸಿದೆ. ಅವಳ ಒಳ ನೋವುಗಳು, ಭಾವನೆಗಳಲ್ಲಿನ ಸಂಘರ್ಷಗಳು, ಅಸಹಾಯಕತೆ, ತಾನು ಮಾಡದ ತಪ್ಪಿಗೆ ಶಿಕ್ಷೆ ಅನುಭವಿಸುವ ಪರಿ ಈ ಚಿತ್ರದಲ್ಲಿ ನೋಡುಗರ ಮನಸ್ಸನ್ನು ಕಲಕುತ್ತದೆ.*

**ಮುಖ್ಯಪದಗಳು (Keywords):** *ಕನ್ನಡ ಸಿನಿಮಾ, ಗಿರೀಶ್ ಕಾಸರವಳ್ಳಿ, ರಂ.ಶಾ ಲೋಕಪುರ, ತಾಯಿ ಸಾಹೇಬ*

**ಪೀಠಿಕೆ**

ಬೈಲಹೊಂಗಲದಲ್ಲಿರುವ "ತಾಯಿ ಸಾಹೇಬ" ಸಿನಿಮಾವು ಹೊಸ ಬಗೆಯ ಹೆಣ್ಣಿನ ಸಮಸ್ಯೆಗಳನ್ನು ಹೇಳುತ್ತಾ ಬರುತ್ತದೆ. ಈ ಕಾದಂಬರಿಯ ಮುಖ್ಯ ಪಾತ್ರ ನರ್ಮದಾ ತಾಯಿ ಅಥವಾ ತಾಯಿ ಸಾಹೇಬ(ಜಯಮಾಲಾ). ಉತ್ತರ ಕರ್ನಾಟಕದ ಬ್ರಾಹ್ಮಣ ದೇಸಗತಿ(ಜಮೀನ್ದಾರಿ) ಮನೆತನಕ್ಕೆ ಸೇರಿದ ಅಪ್ಪ ಸಾಹೇಬ(ಸುರೇಶ್ ಹೆಬ್ಳೀಕರ್)ರ ಎರಡನೇ ಹೆಂಡತಿ ನರ್ಮದಾ ತಾಯಿ ಅಥವಾ ತಾಯಿ ಸಾಹೇಬ. ಈ ಸಿನಿಮಾವು ಮಧ್ಯರಾತ್ರಿ ಅಪ್ಪ ಸಾಹೇಬ ವಾಡೆಗೆ ಹಿಂತಿರುಗುವ ಹಾಗೂ ಅವರ ಬರುವನ್ನು ಕಾಯುವ ತಾಯಿ ಸಾಹೇಬರ ದೃಶ್ಯದಿಂದ ಆರಂಭವಾಗುತ್ತದೆ. ಹೆಚ್ಚು ವಯಸ್ಸಿನ ಅಂತರವಿರುವ ಅಪ್ಪ ಸಾಹೇಬ ಮತ್ತು ತಾಯಿ ಸಾಹೇಬರ ಸಂಬಂಧವನ್ನು ಬಿಚ್ಚಿಡುತ್ತಾ ಬರುತ್ತದೆ. ತಾಯಿ ಸಾಹೇಬ ಅಪ್ಪ ಸಾಹೇಬರು

*Please cite this article as:* ಶಶಿಕಲ, ಎ.ಎಸ್. (2025). ತಾಯಿ ಸಾಹೇಬ: ಒಂದು ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(3). ಪು.ಸಂ.* 10–17

ವಾಡೆಗೆ ಹಿಂತಿರುಗುತ್ತಾರೆ ಎಂಬ ವಾರ್ತೆಯನ್ನು ಕೇಳಿ ಸಂತಸದಿಂದ ಚಿನ್ನದ ಆಭರಣಗಳನ್ನು ಧರಿಸಿ ಅವರ ಮುಂದೆ ಸುಳಿದಾಡಿ ಅವರಿಂದ ದೈಹಿಕ ಸುಖವನ್ನು ಪಡೆಯುವ ಬಯಕೆಯನ್ನು ವ್ಯಕ್ತಪಡಿಸುತ್ತಾರೆ. ಆದರೆ ಅಪ್ಪ ಸಾಹೇಬರಿಗೆ ನರ್ಮದಾ ಬಗ್ಗೆ ಆಸಕ್ತಿ ಇರುವುದಿಲ್ಲ. ಅಪ್ಪಾ ಸಾಹೇಬರಿಗೆ ತಾಯಿ ಸಾಹೇಬರ ಜೊತೆಗೆ ಮೊದಲ ಹೆಂಡತಿ ರಾಧಾಬಾಯಿ ಹಾಗೂ ವಿವಾಹವಾಗದ ಗೌರವಯುತವಾಗಿ ಸಂಸಾರ ನಡೆಸುವ ಚಂದ್ರಿಯ ಜೊತೆಗೆ ಸಂಬಂಧವಿರುತ್ತದೆ. ಅಪ್ಪ ಸಾಹೇಬರಿಂದ ಚಂದ್ರಿಗೆ ಮೂರು ಮಕ್ಕಳಿದ್ದು ಅವುಗಳನ್ನು ತಮ್ಮ ಸ್ವಂತ ಮಕ್ಕಳಂತೆ ಲಾಲನೆ ಪಾಲನೆ ಮಾಡುತ್ತಾ ಬರುತ್ತಿರುತ್ತಾರೆ.

ಅಪ್ಪ ಸಾಹೇಬರು ಮಧ್ಯರಾತ್ರಿ ಹಿಂತಿರುಗಿದ ನಂತರ ವಾಡೆಯ ಎಲ್ಲಾ ಮಂದಿಯನ್ನು ಒಂದು ಕಡೆ ಸೇರಲು ಹೇಳಿ ದೇಶಕ್ಕೆ ಸ್ವತಂತ್ರ ಬಂದಿದೆ ಅದನ್ನು ನಾವು ಆಚರಿಸಬೇಕೆಂದು ಎಲ್ಲರಿಗೂ ತಿಳಿಸುತ್ತಾರೆ. ಏನನ್ನು ಅರಿಯದ ಮುಗ್ಧ ಜನ ಎಲ್ಲರೂ ಬಂದು ವಾಡೆಯ ಒಳಗೆ ನೆರೆಯುತ್ತಾರೆ. ನಂತರ ಅಪ್ಪಾ ಸಾಹೇಬರು ಮಿಂದು ಬಂದು ಒಂದಿಷ್ಟು ಸಿಹಿ ಹೆಚ್ಚು ಮಾಡು, ಊರ ಜನರಿಗೆ ಹಂಚಬೇಕು ಎಂದು ಹೇಳಿ ಧ್ವಜಾರೋಹಣ ಮಾಡಲು "ಪಿತಾಂಬರ ಉಡಲೋ? ಖಾದಿ ಉಡುಲೋ?"[1] ಎಂದು ನರ್ಮದಾಳನ್ನು ಕೇಳುತ್ತಾರೆ. ಕೊನೆಗೆ ಖಾದಿ ಬಟ್ಟೆಯನ್ನು ಧರಿಸಿ ಧ್ವಜಾರೋಹಣ ಮಾಡಿ ಜನಗಣಮನ ಗೀತೆಯನ್ನು ಹಾಡಿ ವಾಡೆಯ ಮಂದಿಗೆ ಸಿಹಿ ಹಂಚುತ್ತಾರೆ. ಇದರ ಜೊತೆಗೆ ಅಪ್ಪ ಸಾಹೇಬರಿಗೆ ಗಂಡು ಸಂತಾನವಿರದಿದ್ದ ಕಾರಣಕ್ಕೆ ತಮ್ಮ ಮೊದಲನೇ ಹೆಂಡತಿ ರಾಧಾಬಾಯಿ ಸಹೋದರನಾದ ವೆಂಕೋಬ(ಶಿವರಾಮ)ನ ಮಗ ನಾರಾಯಣ(ಹರೀಶ್ ರಾಜ್)ನನ್ನು ದತ್ತುಗೆ ತೆಗೆದುಕೊಳ್ಳುವ ನಿರ್ಧಾರವನ್ನು ಮಾಡಿರುತ್ತಾರೆ. ಇದು ತಾಯಿ ಸಾಹೇಬರಿಗೆ ತಿಳಿದಿರುವುದಿಲ್ಲ. ಸಿನಿಮಾದಲ್ಲಿ ತಾಯಿ ಸಾಹೇಬ ಈ ಕೆಳಗಿನಂತೆ ಯಮುನಾ ಬಾಯಿಯ ಜೊತೆ ಈ ಗಂಡಸರು ಯಾವ ವಿಷಯವನ್ನಾದರೂ ಹೇಳಿ ಮಾಡ್ತಾರ? ಎಂದು ತನ್ನಷ್ಟಕ್ಕೆ ತಾನೇ ಗೊಣಗಿಕೊಳ್ಳುತ್ತಾರೆ.

ನಾರಾಯಣನನ್ನು  ದತ್ತು ತೆಗೆದುಕೊಂಡ ನಂತರ ಅನೇಕ ಸಮಸ್ಯೆಗಳು ಪ್ರಾರಂಭವಾಗುತ್ತವೆ. ತಾಯಿ ಸಾಹೇಬ ನಾರಾಯಣನನ್ನು ತನ್ನ ಸ್ವಂತ ಮಗನ ಹಾಗೆ ನೋಡಿಕೊಳ್ಳುವ ಪ್ರಯತ್ನ ಮಾಡುತ್ತಿರುತ್ತಾರೆ. ರಾಧಾಬಾಯಿ ಮೊದಲ ಹೆಂಡತಿ, ವಾಡೆಯಿಂದ ದೂರವಿದ್ದು ಯಾವ ಗೊಡವೆಗಳು ಬೇಡವೆಂದು ದೇವಾಲಯದಲ್ಲೇ ನೆಲೆಸಿ ಬಿಟ್ಟಿರುತ್ತಾರೆ. ತಾಯಿ ಸಾಹೇಬ ಮಾತ್ರ ವಾಡೆಗಂಟಿಕೊಂಡಂತೆ ತಮ್ಮ ಜೀವನವನ್ನು ನಡೆಸುವ ಪ್ರಯತ್ನ ಮಾಡುತ್ತಿರುತ್ತಾರೆ. ಅಪ್ಪ ಸಾಹೇಬರು ಹೋರಾಟ ಎಂದು ಪದೇ ಪದೇ ಊರು ಬಿಡುತ್ತಿರುತ್ತಾರೆ. ನಾಣುವನ್ನು  ದತ್ತಕ ತೆಗೆದುಕೊಂಡ ಮೇಲೆ ವೆಂಕೋಬ ವಾಡೆಯಲ್ಲೇ ನೆಲೆಸಿ ದೇಸಗತಿಯ ಉಸ್ತುವಾರಿ ವಹಿಸಿಕೊಂಡಿರುತ್ತಾನೆ.

ಮಧ್ಯಮ ವರ್ಗದ ಜೀವನ ಕಂಡಿದ್ದ ನಾರಾಯಣ ದೇಸಗತಿಯ ವಾಡೆಗೆ ಹೊಂದಿಕೊಳ್ಳಲಿಕ್ಕೆ ಸ್ವಲ್ಪ ಸಮಯವನ್ನು ತೆಗೆದುಕೊಳ್ಳುತ್ತಾನೆ. ನಂತರ ಹೊಂದಿಕೊಳ್ಳುತ್ತ ದೇಸಗತಿಯ ಸೌಲಭ್ಯಗಳನ್ನು ಸವಿಯುತ್ತಾನೆ. ಇದರ ನಡುವೆ ಅವನು ತನ್ನ ದತ್ತಕ ತಂದೆಯ ಉಪ ಪತ್ನಿ ಚಂದ್ರಿಯ ಮಗಳು ಮಂಜರಿಯಲ್ಲಿ ಅನುರಕ್ತನಾಗುತ್ತಾನೆ. ವಾವೆ(ಸಂಬಂಧ)ಯಲ್ಲಿ ಮಂಜರಿ ನಾಣುವಿಗೆ ಅಣ್ಣನಾಗಬೇಕು. ಇದನ್ನು ತಿಳಿಯದ ನಾಣು ಮಂಜರಿ ಬೇಕೆಂದು ಹಠ ಹಿಡಿಯುತ್ತಾನೆ. ಇದರಿಂದ ಖಿನ್ನರಾದ ತಾಯಿ ಸಾಹೇಬ ದತ್ತಕವನ್ನು

ರದ್ದು ಪಡಿಸಿದರೆ ನಾಣು ಮಂಜರಿಯನ್ನು ವಿವಾಹವಾಗಬಹುದೆಂಬ ಯೋಚನೆಯನ್ನು ಮಾಡುತ್ತಾರೆ. ಈ ಮಧ್ಯೆ ಅಪ್ಪ ಸಾಹೇಬ ಮತ್ತೆ ಜಮೀನ್ದಾರಿ ಪದ್ಧತಿಯ ವಿರುದ್ಧ ನಡೆಯುವ ಹೋರಾಟದಲ್ಲಿ ಭಾಗವಹಿಸಿ ಕಾಣೆಯಾಗುತ್ತಾರೆ. ನಾಣು ಮಂಜರಿಯನ್ನು ವಿವಾಹವಾಗಲು ಸಾಧ್ಯವಿಲ್ಲವೆಂದು ತಿಳಿದು ವಾಡೆ ಬಿಟ್ಟು ಶಹರನ್ನು ಸೇರುತ್ತಾನೆ. ಇದರಿಂದ ತಾಯಿ  ಸಾಹೇಬರಿಗೆ ಏನು ಮಾಡಲು  ತೋಚದೆ ನಾರಾಯಣನನ್ನು ಹುಡುಕಿ, ಮೊದಲ ಬಾರಿಗೆ ವಾಡೆಯ ಬಾಗಿಲನ್ನು ದಾಟಿ ಹೊರ ನಡೆಯುತ್ತಾರೆ. ಇದರ ಜೊತೆಗೆ ಅಪ್ಪ ಸಾಹೇಬರನ್ನು ಹುಡುಕಿ ಚಂದ್ರಿಯ ಜೊತೆ ಶಹರಿನ ಜೈಲುಗಳನ್ನು ಅಲೆಯುತ್ತಾರೆ. ಎಲ್ಲಿಯೂ ಅಪ್ಪಾಸಾಹೇಬರು ಕಾಣುವುದಿಲ್ಲ. ಮುಂದೆ ಏನು ಮಾಡಲು ತೋಚದೆ ತಾಯಿ ಸಾಹೇಬ ದತ್ತಕವನ್ನು ರದ್ದುಗೊಳಿಸಿ ನಾಣು ಮಂಜರಿಯ ವಿವಾಹವಾಗುವಂತೆ ಏರ್ಪಾಟು ಮಾಡುತ್ತಾರೆ. ಇದರಿಂದ ಕುಪಿತಗೊಂಡ ವೆಂಕೋಬ ದತ್ತಕವನ್ನು ರದ್ದುಗೊಳಿಸಿದ್ದಕ್ಕಾಗಿ ತಾಯಿ ಸಾಹೇಬರನ್ನು ಅರೆಸ್ಟ್ ಮಾಡಿಸುತ್ತಾನೆ.

ಹೀಗೆ ಸಿನಿಮಾ ದೇಸಗತಿಯನ್ನು ಮುಂದುವರಿಸಲು ದತ್ತಕವನ್ನು ಮಾಡಿಕೊಂಡು ಮತ್ತೆ ನಾಣುವಿನ ವಿವಾಹ ನಡೆಸಲು ಅದೇ ದತ್ತಕವನ್ನು ರದ್ದುಗೊಳಿಸುವುದನ್ನು ಗಿರೀಶ್ ಕಾಸರವಳ್ಳಿ ಅವರು ಬಹಳ ವ್ಯಂಗ್ಯವಾಗಿ ಚಿತ್ರಿಸಿದ್ದಾರೆ. ತಾಯಿ ಸಾಹೇಬ ಸಿನಿಮಾವು 1997ರಲ್ಲಿ ಬಿಡುಗಡೆಗೊಂಡಿದ್ದು, ಶ್ರೀ ಸೌಂದರ್ಯ ಆರ್ಟ್ಸ್ ಸಂಸ್ಥೆ ನಿರ್ಮಿಸಿದೆ, ಮೂಲ ಕಥೆಗಾರರು ರಂ.ಶಾ. ಮುಖ್ಯ ಭೂಮಿಕೆಯಲ್ಲಿ ಜಯಮಾಲಾ, ಸುರೇಶ್ ಹೆಬ್ಳೀಕರ್, ಶಿವರಾಮ, ಹರೀಶ್‌ರಾಜ್, ಸುಧಾ ಬೆಳವಾಡಿ ಮುಂತಾದವರಿದ್ದಾರೆ. ಎಚ್.ಎಂ.ರಾಮಚಂದ್ರ ಹಾಲ್ಕೆರೆಯ ಛಾಯಾಗ್ರಹಣ, ಸಂಗೀತ– ಥಾಮಸ್ ಕೊಟ್ಟುಕಪಲ್ಲಿ, ವಸ್ತ್ರ ವಿನ್ಯಾಸ ವೈಶಾಲಿ ಕಾಸರವಳ್ಳಿ. ಈ ಸಿನಿಮಾಗೆ ಸಂದ ಗೌರವ ಪ್ರಶಸ್ತಿಗಳೆಂದರೆ ರಾಷ್ಟ್ರಪತಿಗಳ ಸ್ವರ್ಣ ಕಮಲ ಪ್ರಶಸ್ತಿ, ಅತ್ಯುತ್ತಮ ವಸ್ತ್ರಂಕಾಲ ಪ್ರಶಸ್ತಿ, ಅತ್ಯುತ್ತಮ ಕಲಾ ನಿರ್ದೇಶನ ಪ್ರಶಸ್ತಿ, ರಾಜ್ಯ ಪ್ರಶಸ್ತಿಗಳು – ಶ್ರೇಷ್ಠ ನಟಿ ಜಯಮಾಲಾ, ಪ್ರಥಮ ಅತ್ಯುತ್ತಮ ಚಿತ್ರ, ಅತ್ಯುತ್ತಮ ಕಥೆ ಮುಂತಾದವುಗಳು.

**ತಾಯಿ ಸಾಹೇಬ (1973) ಕಾದಂಬರಿ**

ತಾಯಿ ಸಾಹೇಬ ಕಾದಂಬರಿಯು ಸಿನಿಮಾಗಿಂತ ಭಿನ್ನವಾಗಿದೆ. ಗಿರೀಶ್ ಕಾಸರವಳ್ಳಿ ಅವರು ಇಡೀ ಕಾದಂಬರಿಯ ಚಿತ್ರಣವನ್ನು ಬೇರೆ ರೀತಿಯಲ್ಲಿ ಚಿತ್ರಿಸಿದ್ದಾರೆ. ಅಪ್ಪ ಸಾಹೇಬರು ತನ್ನ ಮೂರನೇಯ ಉಪಪತ್ನಿ ಚಂದ್ರಾಳ ಮನೆಯಲ್ಲಿ ಅನಾರೋಗ್ಯದಿಂದ ಬಳಲುತ್ತಿದ್ದಾರೆ ಎಂಬ ಸಂದೇಶವನ್ನು ಅವಳ ಹಿರಿಯ ಮಗ ರಮೇಶ ತಾಯಿ ಸಾಹೇಬರಿಗೆ ಹೇಳುವ ದೃಶ್ಯದಿಂದ ಕಾದಂಬರಿ ಪ್ರಾರಂಭವಾಗುತ್ತದೆ. ಆನಂತರ ತಾಯಿ ಸಾಹೇಬ ಮತ್ತು  ರಾಧಾಬಾಯಿ ಇವರಿಬ್ಬರು ಚಂದ್ರಾಳ ಮನೆಗೆ ಬರುತ್ತಾರೆ. ಅಪ್ಪ ಸಾಹೇಬರು ತಮ್ಮ ಕೊನೆಯ ಕ್ಷಣಗಳನ್ನು ಎಣಿಸುತ್ತ ನಡುಮನೆಯ ಪಲ್ಲಂಗದ ಮೇಲೆ ಪವಡಿಸಿರುತ್ತಾರೆ. ಮೊದಲ ಇಬ್ಬರು ಶ್ರೀಮತಿಯನ್ನು ಕಂಡು ಸಾಹೇಬರು ತಮ್ಮ ಕೊನೆ ಕ್ಷಣಗಳಲ್ಲಿಯೂ ಸಹ  ಸಿಂಡರಿಸಿಕೊಳ್ಳುತ್ತಾರೆ. ಅವರನ್ನು ದೂರ ಹೋಗಲು ಸನ್ನೆ ಮಾಡುತ್ತಾರೆ. ಇದರಿಂದ ರಾಧಾಬಾಯಿಗೆ ಮತ್ತು ನರ್ಮದಾಬಾಯಿ ಅವರಿಗೆ ಮುಜುಗರ ಉಂಟಾಗುತ್ತದೆ. ಅಪ್ಪಾ ಸಾಹೇಬರು ಕೊನೆಗೆ ಕಾಲವಾಗುತ್ತಾರೆ.

ಈಗ ಸಮಸ್ಯೆಗಳು ಸಾಲು ಸಾಲಾಗಿ ಪ್ರಾರಂಭವಾಗುತ್ತವೆ. ದೇಸಗತಿಯನ್ನು  ನೋಡಿಕೊಳ್ಳಲು ಅಪ್ಪ ಸಾಹೇಬರಿಗೆ ತಮ್ಮ  ಮೊದಲ  ಹೆಂಡತಿಯರಿಂದ ಒಂದು ಗಂಡು ಮಗುವೂ ಸಹ ಆಗಿರುವುದಿಲ್ಲ.

ದೇಸಗತಿ ಮುಂದುವರಿಸಬೇಕೆಂದು ಅಪ್ಪಾಸಾಹೇಬರ ಮೊದಲ ಹೆಂಡತಿ ರಾಧಾಬಾಯಿ ಅವರ ತಮ್ಮ ಗೋವಿಂದಪ್ಪನ ಮೊದಲ ಮಗ ನಾರಾಯಣನನ್ನು ದತ್ತಕ ಮಾಡಿಕೊಳ್ಳಲು ನಿರ್ಧಾರವಾಗುತ್ತದೆ. ಆದರೆ ಈ ನಿರ್ಧಾರ ನರ್ಮದಾ ಬಾಯಿಗೆ ತಿಳಿದಿರುವುದಿಲ್ಲ. ಗೋವಿಂದಪ್ಪ ಬಹಳ ಗುಟ್ಟಾಗಿ ವಿಷಯವನ್ನು ನರ್ಮದಬಾಯಿಂದ ಮುಚ್ಚಿಟ್ಟಿರುತ್ತಾನೆ. ದತ್ತಕ ಕಾರ್ಯ ವಾಡೆಯಲ್ಲಿ ಬಹಳ ಅದ್ದೂರಿಯಿಂದ ನಡೆಯುತ್ತದೆ. ನಾರಾಯಣ ಸಂಕೇಶ್ವರದಿಂದ ಪಟ್ಟಣಕೋಡಿಯ ವಾಡೆಗೆ ಬಂದಿಳಿದನು. ದತ್ತಕದ ನಂತರ ನಾರಾಯಣನಿಗೆ ಬಹಳ ಬೇಗ ಬೇಸರವಾಗಲು ಆರಂಭವಾಯಿತು. ಕಾರಣ ತಾನು ಹುಟ್ಟೂರಲ್ಲಿ ಬಹಳ ಸ್ವತಂತ್ರನಾಗಿ ತನ್ನ ಗೆಳೆಯರೊಡನೆ ಹರಟುತ್ತ, ಇಸ್ಪೀಟ್ ಆಡುತ್ತಾ ಕಾಲ ಕಳೆಯುತ್ತಿದ್ದನು. ವಾಡೆಯಲ್ಲಿ ಇವನಿಗೆ ಅಂತಹ ಸ್ನೇಹಿತರು ಯಾರು ದೊರೆಯಲಿಲ್ಲ. ಹಾಗಾಗಿ ಅವನು ಬಹಳ ದುಃಖ ತಪ್ತನಾಗಿದ್ದನು. ಒಮ್ಮೆ ಹುಡುಗಿಯರ ನಡುವೆ ಮಂಜರಿಯನ್ನು ಕಂಡು ಅವಳಲ್ಲಿ ಅನುರಕ್ತನಾಗುತ್ತಾನೆ. ಅವಳಿಗಾಗಿ ಪಟ್ಟಣ ಕೋಡಿಯಲ್ಲಿ ನಡೆಯುವ ಜಾತ್ರೆಯಲ್ಲಿ ಬಾಸುಂಡೆ ಬರುವಂತೆ ಒದೆಗಳನ್ನು ತಿನ್ನುತ್ತಾನೆ. ಇಷ್ಟಾದರೂ ಅವನ ಮನಸ್ಸು ಮಂಜರಿಯ ಆಕರ್ಷಣೆಯಿಂದ ತಪ್ಪಿಸಿಕೊಳ್ಳಲು ಆಗುವುದಿಲ್ಲ.

ಊರಲ್ಲಿ ನಡೆಯುವ ನಾಟಕದ ಸಂದರ್ಭ ಅವರ ಇಬ್ಬರ ನಡುವೆ ಪ್ರೀತಿಮೂಡುವಂತೆ ಮಾಡುತ್ತದೆ. ನಾಟಕ ನಡೆಯುವ ರಾತ್ರಿ ಅವರಿಬ್ಬರು ಊರಿನ ಆಚೆ ಭೇಟಿಯಾಗಿ ಪ್ರೀತಿಯ ಅಮಲಿನಲ್ಲಿ ಬಿದ್ದು ದೈಹಿಕ ಸಂಪರ್ಕವನ್ನು ಹೊಂದುತ್ತಾರೆ. ಆದರೆ ವಿಧಿಯಾಟ ಬೇರೆ ಆಗಿರುತ್ತದೆ. ಮಂಜರಿ ಬೇರೆ ಯಾರು ಅಲ್ಲದೆ ಅಪ್ಪ ಸಾಹೇಬರ ಉಪ ಪತ್ನಿ ಚಂದ್ರಾಳ ಮಗಳಾಗಿರುತ್ತಾಳೆ. ಶಾಲೆಯಲ್ಲಿ ಅಪ್ಪ ಸಾಹೇಬ ಮಂಜರಿ ತಂದೆಯ ಹೆಸರು ಮುಂದೆ ತಮ್ಮ ಹೆಸರನ್ನು ನಮೂದಿಸಿರುತ್ತಾರೆ. ಇದರಿಂದ ಮಂಜರಿ ವಾವೆ(ಸಂಬಂಧ)ಯಲ್ಲಿ ನಾರಾಯಣನಿಗೆ ತಂಗಿ ಆಗಬೇಕಾಗಿರುತ್ತದೆ. ಇದ್ಯಾವುದು ನಾರಾಯಣನ ತಲೆಗೆ ನಾಟುವುದಿಲ್ಲ. ಅವನು ರಾಧಾ ಬಾಯಿಯೊರೊಡನೆ ತಾನು ಮಂಜರಿಯನ್ನು ವಿವಾಹವಾಗುತ್ತೇನೆ ಎಂದು ಕೇಳುತ್ತಾನೆ. ಈ ವಿಷಯವನ್ನು ತಿಳಿದ ರಾಧಾಬಾಯಿ ಎದೆ ಒಡೆದು ಸಾಯುತ್ತಾರೆ.

ಈ ಯಾವುದೇ ವಿಷಯಗಳ ಅರಿವಿಲ್ಲದ ನರ್ಮದಾ ಬಾಯಿ ವಾಡೆಯ ಪಕ್ಕದ ಓಣಿಯಲ್ಲಿ ಹೊಸ ಮನೆ ನಿರ್ಮಿಸಿಕೊಂಡು ನೆಲೆಸಿರುತ್ತಾಳೆ. ಮುಂದಿನ ದಿನಗಳಲ್ಲಿ ನಾರಾಯಣ ಮಂಜರಿ ಜೊತೆ ಸ್ನೇಹವನ್ನು ಮುಂದುವರಿಸುತ್ತಾನೆ. ಈ ನಡುವೆ ಹೆರಿಗೆಯ ಸಮಯದಲ್ಲಿ ನಾರಾಯಣನ ತಾಯಿ ತಿಪ್ಪಕ್ಕ ಮರಣ ಹೊಂದಿದ್ದರಿಂದ ನಾರಾಯಣನ ಇಡೀ ಕುಟುಂಬ ಸಂಕೇಶ್ವರದಿಂದ ಪಟ್ಟಣ ಕೋಡಿಗೆ ಬಂದು ನೆಲೆಸುವ ಸಂದರ್ಭ ಬರುತ್ತದೆ. ಇದರಿಂದ ನಾರಾಯಣನ ತಮ್ಮ–ತಂಗಿಯರು ಅಪ್ಪ ಇವರೆಲ್ಲರೂ ವಾಡೆಯಲ್ಲಿ ನೆಲೆಸುತ್ತಾರೆ. ಮುಂದೊಂದು ದಿನ ನಾರಾಯಣನ ಮದುವೆಯ ಮಾತುಕತೆ ಮತ್ತೆ ಪ್ರಾರಂಭವಾಗುತ್ತದೆ. ಈ ಸಂದರ್ಭದಲ್ಲಿ ನಾರಾಯಣ ಮಂಜರಿಯನ್ನು ವಿವಾಹವಾಗುವ ತನ್ನ ಇಂಗಿತವನ್ನು ಮತ್ತೆ ತಾಯಿ ಸಾಹೇಬರ ಮುಂದೆ ವ್ಯಕ್ತ ಪಡಿಸುತ್ತಾನೆ. ಇದು ತಾಯಿ ಸಾಹೇಬರಿಗೆ ಸಿಡಿಲಿನಂತೆ ಎರಗುತ್ತದೆ. ತಾಯಿ ಸಾಹೇಬ ಬಹಳ ಯೋಚಿಸಿ ನಾರಾಯಣನಿಗೆ ಬುದ್ಧಿ ಮಾತು ಹೇಳುತ್ತಾರೆ. ಆದರೆ ಪ್ರೀತಿಯಲ್ಲಿ ಬಿದ್ದಿದ್ದ ನಾಣುವಿಗೆ ಇದ್ಯಾವುದರ ಪರಿವೆ ಉಂಟಾಗುವುದಿಲ್ಲ. ಕೊನೆಗೆ ತಾಯಿ ಸಾಹೇಬ ತಾವು ತೆಗೆದುಕೊಂಡಿದ್ದ ದತ್ತಕವನ್ನು ರದ್ದುಪಡಿಸಿ ಮಂಜರಿಯ ಜೊತೆ ವಿವಾಹ ನಡೆಸಲು ವಾಡೆಯನ್ನು ಬಿಟ್ಟು ಕೊಲ್ಹಾಪುರಕ್ಕೆ

ಹೋಗುತ್ತಾರೆ. ಗೋವಿಂದಪ್ಪನ ಪಿತೂರಿಯಿಂದಾಗಿ ದತ್ತಕ ರದ್ದಾಗುವುದು ತಡವಾಗುತ್ತದೆ. ಇತ್ತ ಪ್ರಾಮಾಣಿಕವಾಗಿ ನಾರಾಯಣನಿಗೆ ತನ್ನನ್ನು ಸಮರ್ಪಿಸಿಕೊಂಡಿದ್ದ ಮಂಜರಿ ತನ್ನ ವಿವಾಹ ನಾರಾಯಣನ ಜೊತೆ ನೆರವೇರುವುದಿಲ್ಲವೆಂದು ತಿಳಿದು ಕಾಣೆಯಾಗುತ್ತಾಳೆ. ತನ್ನ ಬಸಿರ ವಿಚಾರ ತಿಳಿಯಬಾರದೆಂದು ಅವಳು ದೂರದ ಊರಲ್ಲಿ ಎಲ್ಲೋ ತನ್ನ ಪ್ರಾಣ ಕಳೆದು ಕೊಳ್ಳುತ್ತಾಳೆ.

ಈ ಪ್ರಸಂಗದ ನಂತರ ನಾರಾಯಣ ವಿಚಿತ್ರವಾಗಿ ನಡೆದುಕೊಳ್ಳಲು ಪ್ರಾರಂಭಿಸುತ್ತಾನೆ. ತಮ್ಮ ಮನೆಯಲ್ಲಿದ್ದ ಅನುಸೂಯಳೊಡನೆ ದೈಹಿಕ ಸಂಬಂಧವನ್ನು ಹೊಂದುತ್ತಾನೆ. ಇದರ ಜೊತೆಗೆ ಕೊಲ್ಹಾಪುರದ ಪರಸ್ತ್ರೀಯರ ಸಂಘವನ್ನು ಮಾಡುತ್ತಾನೆ. ಇತ್ತ ನರ್ಮದಾ ಬಾಯಿ ಹೇಗಾದರೂ ಮಾಡಿ ದತ್ತಕ ರದ್ದುಪಡಿಸಿ ಚಂದ್ರಾಳ ಮಕ್ಕಳಿಗೆ ಆಸ್ತಿ ದೊರೆಯುವಂತೆ ಪ್ರಯತ್ನಿಸಿ ಸಫಲವಾಗುತ್ತಾಳೆ. ಈ ಪ್ರಯತ್ನ ನಡೆಯುವಾಗ ನಾರಾಯಣ ಅವಳ ಹೊಟ್ಟೆಗೆ ಗುಂಡು ಹಾರಿಸುತ್ತಾನೆ. ಇದರಿಂದ ತಾಯಿ ಸಾಹೇಬ ಮರಣ ಹೊಂದುತ್ತಾರೆ. ಇದಾದ ನಂತರ ಅಪ್ಪಸಾಹೇಬರ ಪೂರ್ತಿ ಆಸ್ತಿ ಚಂದ್ರಳ ಮಕ್ಕಳಿಗೆ ಸಿಗುತ್ತದೆ. ನಾರಾಯಣನಿಗೆ ಜೈಲು ಶಿಕ್ಷೆ ಆಗುತ್ತದೆ.

ಇನ್ನು ಸಿನಿಮಾ ಮತ್ತು ಕಾದಂಬರಿಯಲ್ಲಿನ ಮಹಿಳೆಯರ ಸಮಸ್ಯೆಗಳನ್ನು ಗಮನಿಸಿದಾಗ ನಮಗೆ ಹಲವಾರು ವಿಷಯಗಳು ಕಾಣಿಸಿತ್ತವೆ. ಈ ಸಿನಿಮಾದಲ್ಲಿ ಮಹಿಳೆಯರ ನಿರ್ಲಕ್ಷ್ಯ ಎಲ್ಲಾ ಸಂದರ್ಭದಲ್ಲಿ ಎದ್ದು ಕಾಣುತ್ತದೆ. ತಾಯಿ ಸಾಹೇಬ, ಅಕ್ಕಸಾಹೇಬ, ಚಂದ್ರಿ, ಅವಳ ಮಗಳು ಮಂಜರಿ, ತಿಪ್ಪಕ್ಕ(ನಾರಾಯಣನ ಹೆತ್ತ ತಾಯಿ), ವಿಶಾಲಾಕ್ಷಿ(ನಾರಾಯಣನ ತಂಗಿ), ಯಮುನಾ ಬಾಯಿ, ಅನುಸೂಯೆ(ವಾಡೆಯಲ್ಲಿನ ಅಡುಗೆ ಕೆಲಸದವರು) ಈ ಚಿತ್ರದಲ್ಲಿ ಕಂಡುಬರುವ ಪ್ರಮುಖ ಮಹಿಳಾ ಪಾತ್ರಗಳು. ಅಪ್ಪ ಸಾಹೇಬರು ಹೊರ ಜಗತ್ತಿನಲ್ಲಿ ಸ್ವತಂತ್ರ ಹೋರಾಟಗಾರರು, ಗಾಂಧಿವಾದಿಯಾಗಿದ್ದರು ತಮ್ಮ ವಾಡೆಯಲ್ಲಿ ಇನಾಂದಾರರಾಗಿದ್ದಾಗ, ಜಮೀನ್ದಾರರಾಗಿ ಮೂವರು ಪತ್ನಿಯರನ್ನು ಹೊಂದಿರುವ ಯಜಮಾನರಾಗಿ ತಮ್ಮ ದಬ್ಬಾಳಿಕೆಯನ್ನು ಮುಂದುವರಿಸುತ್ತಿರುತ್ತಾರೆ. ತಾವು ಎಲ್ಲಿಗೆ ಹೋಗುತ್ತೀನಿ? ಎಂದು ಬರುತ್ತೇನೆ? ಎಂಬ ವಿಷಯಗಳನ್ನು ತಮ್ಮ ಪತ್ನಿಯರಿಗೆ ತಿಳಿಸುವುದೇ ಇಲ್ಲ. ಒಬ್ಬರಂತಲ್ಲ ಇಬ್ಬರು ಪತ್ನಿಯರ ಜೊತೆಗೆ ಇನ್ನೊಬ್ಬ ಉಪ ಪತ್ನಿಯನ್ನು ಮಾಡಿಕೊಂಡಿದ್ದು ಅಪ್ಪಸಾಹೇಬರ ನಡುವಳಿಕೆಯಲ್ಲಿ ಆದರ್ಶಗಳು ಮತ್ತು ಯಜಮಾನಶಾಹಿತ್ವದ ಎರಡು ಗುಣಗಳನ್ನು ಕಾಣಬಹುದು. ಅವರ ಕೊನೆಗಾಲದಲ್ಲಿಯೂ ನಡವಳಿಕೆ ಹೇಗಿತ್ತೆಂದರೆ ರಾಧಾಬಾಯಿಯವರು ಪೇಡೆ ಇಷ್ಟ ಅವರಿಗೆ ಪೇಡೆ ತಂದು ಕೊಡಿರಿ ಎಂದು ಹೇಳುತ್ತಾರೆ. "ನಿಮಗೇನು ಆಗುವುದಿಲ್ಲ ಎಲ್ಲ ನೆಟ್ಟಗೆ ಆಗ್ತದೆ"[2] ಎಂದು ಪೇಡೆಯನ್ನು ಅಪ್ಪ ಸಾಹೇಬರ ಬಾಯಿಗೆ ಇಡುತ್ತಾರೆ. ಆದರೆ ಮರುಕ್ಷಣವೇ ಪೇಡೆಯನ್ನು ಅಪ್ಪ ಸಾಹೇಬರು ರಾಧಾಬಾಯಿ ಅವರ ಮುಖಕ್ಕೆ ಸಿಡಿಯುವಂತೆ "ಥೂ" ಎಂದು ಉಗುಳುತ್ತಾರೆ. ಇದರಿಂದ ಮನನೊಂದ ರಾಧಾಬಾಯಿ ಯಾವ ಗೊಡವೆಗಳೂ ಬೇಡ ಎಂದು ದೂರವಿದ್ದು ಬಿಟ್ಟಿರುತ್ತಾರೆ. ಆಕೆಯ ತಿಳುವಳಿಕೆಯ ಪರಿಧಿ ಬಹಳ ಚಿಕ್ಕದು. ಇನ್ನೂ ಉಪಪತ್ನಿ ಚಂದ್ರಿ ತನ್ನ ಸ್ಥಾನಮಾನಕ್ಕೆ ಹೆಚ್ಚಿನ ಸವಲತ್ತುಗಳನ್ನು ಒದಗಿಸಿಕೊಟ್ಟಿದ್ದ ಅಪ್ಪ ಸಾಹೇಬರಿಗೆ ಋಣಿಯಾಗಿ ಅವರ ಸೇವೆಯನ್ನು ತಪಸ್ಸಂತೆ ಮಾಡುತ್ತ ಜೀವನ ನಡೆಸುತ್ತಿರುತ್ತಾಳೆ. ಆದರೆ ನರ್ಮದಾ ಬಾಯಿ ಅಥವಾ ತಾಯಿ ಸಾಹೇಬ ಮಾತ್ರ ಹೆಚ್ಚಿನ ಅರಿವನ್ನು ಹೊಂದಿ ಆಂತರಿಕವಾಗಿ

ಒದ್ದಾಟವನ್ನು ಅನುಭವಿಸುತ್ತಿರುತ್ತಾರೆ. ತಾಯಿ ಸಾಹೇಬರಿಗೆ ತನ್ನ ಪತಿ ತನ್ನನ್ನು ನಿರ್ಲಕ್ಷಿಸುವುದು ಇಷ್ಟವಿರುವುದಿಲ್ಲ. ಅವಳು ಪ್ರತಿ ಬಾರಿ ತನ್ನ ಅಸ್ಮಿತೆಯನ್ನು ತನ್ನ ಪತಿಯೊಡನೆ ಗುರುತಿಸಿಕೊಳ್ಳಲು ಪ್ರಯತ್ನಿಸಿ ಸೋಲುತ್ತಿರುತ್ತಾರೆ. ಎಷ್ಟೇ ಬಾರಿ ಸೋತರು ತನ್ನ ಪ್ರಯತ್ನವನ್ನು ನಿಲ್ಲಿಸುವುದಿಲ್ಲ. ಅಪ್ಪ ಸಾಹೇಬರು ತಮ್ಮ ಆದರ್ಶಗಳನ್ನು ಹೇಳುತ್ತಾ ಬರುತ್ತಿದ್ದರೆ, ತಾಯಿ ಸಾಹೇಬ ಮಾತ್ರ ಅವುಗಳ ಅರಿವಿಲ್ಲದಿದ್ದರೂ ಎಲ್ಲಾ ಆದರ್ಶಗಳನ್ನು ಕ್ರಿಯಾ ರೂಪಕ್ಕೆ ತರುತ್ತಿರುತ್ತಾಳೆ. ತಾವು ದತ್ತಕ ತೆಗೆದುಕೊಂಡಿದ್ದ ನಾರಾಯಣ ತನ್ನ ಪತಿಯ  ಉಪಪತ್ನಿ ಚಂದ್ರಿಯ ಮಗಳು ಮಂಜರಿಯಲ್ಲಿ ಅನುರಕ್ತನಾದಾಗ ದತ್ತಕವನ್ನು ರದ್ದುಗೊಳಿಸಿ ಅವರ ವಿವಾಹವಾಗಲು ಸಹಕಾರಿಯಾಗುತ್ತಾಳೆ. ತನ್ನ ಗಂಡನ ಉಪ ಪತ್ನಿ ಚಂದ್ರಾಳೊಡನೆ ಅಪ್ಪಸಾಹೇಬರನ್ನು ಹುಡುಕಲು ವಾಡೆಯನ್ನು ಬಿಟ್ಟು ಶಹರಿಗೂ ಕಾಲಿಡುತ್ತಾರೆ. ದಾರಿ ತಪ್ಪಿದ ನಾರಾಯಣನನ್ನು ಕರೆತಂದು ಬುದ್ಧಿವಾದ ಹೇಳಿ ಅವನಿಗೆ ಮಂಜರಿಯ ಜೊತೆ ವಿವಾಹವನ್ನು ನೆರವೇರಿಸುತ್ತಾಳೆ. ಇದರಿಂದ ಕೊನೆಗೆ ಜೈಲು ಪಾಲು ಆಗುತ್ತಾಳೆ. ನಿರ್ದೇಶಕ ಗಿರೀಶ ಕಾಸರವಳ್ಳಿ ಅವರು ಇಡೀ ಸಿನಿಮಾದಲ್ಲಿ ತಾಯಿ ಸಾಹೇಬಳ ಪಾತ್ರವನ್ನು ಬಹಳ ಉದಾತ್ತವಾಗಿ ಚಿತ್ರಿಸಿರುವುದನ್ನು ಕಾಣಬಹುದು. ತಾಯಿ ಸಾಹೇಬ ತನ್ನ ಪರಿಸ್ಥಿತಿಯನ್ನು ಅರಿತು ತಾನು ಸ್ವತಂತ್ರವಾಗುವ ಕಡೆಗೆ ಸಾಗುವ ಅನೇಕ ದೃಶ್ಯಗಳನ್ನು ನಾವಿಲ್ಲಿ ಕಾಣಬಹುದು. ಮೊದಲು ತಾಯಿ ಸಾಹೇಬರಿಗೆ ಅಪ್ಪಾಸಾಹೇಬರು ಯಾವಾಗ ಬರುತ್ತಾರೆ? ಯಾವಾಗ ಹೋಗುತ್ತಾರೆ? ಎಲ್ಲಿಗೆ ಹೋಗುತ್ತಾರೆ? ಏನು ಮಾಡುತ್ತಾರೆ? ಎಂಬ ಪ್ರಶ್ನೆಗಳಿಗೆ ಉತ್ತರ ಸಿಗದೆ ಚಡಪಡಿಸುತ್ತಿರುತ್ತಾಳೆ. ಸಿನಿಮಾದ ಪ್ರಾರಂಭದಲ್ಲಿ ಅಪ್ಪಾ ಸಾಹೇಬರ ಆಗಮನದಿಂದ ಮುದಗೊಂಡು ಚಿನ್ನದ ಆಭರಣಗಳನ್ನು ಧರಿಸಿ ಅಲಂಕರಿಸಿಕೊಂಡು ಅವರನ್ನು ಆಕರ್ಷಿಸಲು ಪ್ರಯತ್ನಿಸುವ ತಾಯಿ ಸಾಹೇಬ, ಮುಂದಿನ ದಿನಗಳಲ್ಲಿ ಸ್ವತಂತ್ರ ನಿರ್ಧಾರಗಳನ್ನು ಕೈಗೊಳ್ಳುವುದನ್ನು ನಾವು ಗಮನಿಸುತ್ತಾ ಬರಬಹುದು. ಮೊದಲನೆಯದಾಗಿ ನಾರಾಯಣನ ದತ್ತಕದ ವಿಷಯ ತಿಳಿಯದೆ ತನ್ನ ಗಂಡನ ಬಗೆಗೆ ಮನಸ್ಸಿನಲ್ಲಿ  ಗೊಣಗಿಕೊಳ್ಳುವ ತಾಯಿ ಸಾಹೇಬ ಅದೇ ದತ್ತಕವನ್ನು ರದ್ದುಗೊಳಿಸಲು ಕೊಲ್ಲಾಪುರದ ವಕೀಲರ ಬಳಿಗೆ ಹೋಗುವಷ್ಟು ಧೈರ್ಯವನ್ನು ತೋರುತ್ತಾಳೆ.

ಇನ್ನು ಗಿರೀಶ್ ರವರು ಇಡೀ ಸಿನಿಮಾದ ಚಿತ್ರೀಕರಣಕ್ಕೆ ಬಳಸಿಕೊಂಡಿರುವ ವಿನ್ಯಾಸವು ಸಿನಿಮಾದ ಪುರುಷ ಸಾಹಿತ್ಯದ ಲಕ್ಷಣಗಳನ್ನು ತೋರಿಸುತ್ತಾ ಬರುತ್ತದೆ. ವಾಡೆಯಲ್ಲಿ ಅನೇಕ ಬಾಗಿಲುಗಳು ಒಂದಾದ ಮೇಲೊಂದು ತೆಗೆದುಕೊಳ್ಳುತ್ತಾ ಹೋಗುವುದು ವಾಡೆಯಲ್ಲಿನ ಹೆಣ್ಣು ಮಕ್ಕಳನ್ನು ಎಷ್ಟು ಬಂಧನದಲ್ಲಿರಿಸಿದೆ ಎಂಬುದನ್ನು ಸಾಂಕೇತಿಕವಾಗಿ ತೋರಿಸಿದ್ದಾರೆ. ವಾಡೆಯನ್ನು ಬಿಟ್ಟು ಹೊರಗೆ ಬರುವ ತಾಯಿ ಸಾಹೇಬ ಪಟ್ಟಣವನ್ನು ನೋಡಿ ಬೆರಗುಗೊಳ್ಳುವುದಿಲ್ಲ. ಅವಳು ಅವಳ ಕ್ರಿಯೆಯ ಕಡೆಗೆ ಗಮನವಿಟ್ಟಿರುತ್ತಾಳೆ ಹಾಗೂ ಅದರಲ್ಲಿ ಯಶಸ್ಸನ್ನು ಕಾಣುತ್ತಾಳೆ. ಇನ್ನು ಕಾದಂಬರಿಯಲ್ಲಿ  ಮಂಜರಿ ದುರಂತದೆಡೆಗೆ ಸಾಗುತ್ತಾಳೆ. ಮಂಜರಿ ಇನ್ನೂ ಎಳೆ ವಯಸ್ಸಿನ ಮುಗ್ಧ ಹುಡುಗಿ. ಏನು ಅರಿಯದ ಮಂಜರಿ ನಾರಾಯಣನ ಪ್ರೀತಿಯಲ್ಲಿ ಬೀಳುತ್ತಾಳೆ. ಅವನು ಅಣ್ಣನಾಗಬೇಕು ಎಂಬ ಸಣ್ಣ ಅರಿವು ಇರದ ಮಂಜರಿ ಹೇಗಾದರೂ ಸರಿ ನಾರಾಯಣನ್ನು ವಿವಾಹವಾಗಲು ಬಯಸುತ್ತಾಳೆ. ಇದು ನೆರವೇರದೆ ಹೋದಾಗ ತನ್ನ ಜೀವನವನ್ನು ಅಂತ್ಯಗೊಳಿಸಿಕೊಳ್ಳುತ್ತಾಳೆ.

ಸಿನಿಮಾದಲ್ಲಿನ ವಸ್ತ್ರ ವಿನ್ಯಾಸ ಅದ್ಭುತವಾಗಿ ಮೂಡಿಬಂದಿದೆ. ಇದಕ್ಕಾಗಿ ವೈಶಾಲಿ ಕಾಸರವಳ್ಳಿಯವರಿಗೆ ರಾಷ್ಟ್ರ ಪ್ರಶಸ್ತಿ ದೊರೆತಿದೆ. ಥಾಮಸ್ ಕೊಟ್ಟುಕಪಲ್ಲಿ ಅವರ ಸಂಗೀತ ನಿಧಾನಗತಿಯಲ್ಲಿ ಪ್ರತಿಯೊಂದು ಸನ್ನಿವೇಶವನ್ನು ನೋಡುಗರ  ಮನಸ್ಸಿಗೆ ತಲುಪುತ್ತದೆ. ಅವರ ಸಂಗೀತವು ಪ್ರತೀ ಸನ್ನಿವೇಶವನ್ನು ಪ್ರೇಕ್ಷಕರ ಮನಸ್ಸಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದೆ. ತಾಯಿ ಸಾಹೇಬರು ಸ್ವತಂತ್ರವಾಗಿ ನಿರ್ಧಾರಗಳನ್ನು ತೆಗೆದುಕೊಂಡಾಗ ಸಂಗೀತವು ಅದನ್ನ ಮೆಲುದನಿಯಲ್ಲಿ ನಮ್ಮ ಮನಸನ್ನು ತಲುಪುತ್ತದೆ. ತಾಯಿ ಸಾಹೇಬರ ಪಾತ್ರದಲ್ಲಿ ಜಯಮಾಲ ಉತ್ತಮವಾಗಿ ನಟಿಸಿದ್ದಾರೆ. ಹೆಚ್ಚಾಗಿ ಕಮರ್ಷಿಯಲ್ ಸಿನಿಮಾಗಳಲ್ಲಿ ನಟಿಸುತ್ತಿದ್ದ ಇವರು ತಾಯಿ ಸಾಹೇಬದಂತಹ ಕಲಾತ್ಮಕ ಸಿನಿಮಾದಲ್ಲಿ ನಟಿಸಿ ಜನರ ಮನಸ್ಸನ್ನು ಗೆದ್ದು ತಮ್ಮ ನಟನೆಗೆ ರಾಷ್ಟ್ರಮಟ್ಟದ ತೀರ್ಪುಗಾರರ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಜೊತೆಗೆ ತಾಯಿ ಸಾಹೇಬ ಸಿನಿಮಾ ಅನೇಕ ರಾಜ್ಯ, ರಾಷ್ಟ್ರ ಪ್ರಶಸ್ತಿಗಳನ್ನು ತನ್ನ ಮುಡಿಗೇರಿಸಿಕೊಂಡಿದೆ.

**ಉಪಸಂಹಾರ**

ತಾಯಿ ಸಾಹೇಬ ಸಿನಿಮಾವು ಕನ್ನಡ ಮಹಿಳಾ ಕೇಂದ್ರಿತ ಸಿನಿಮಾಗಳಲ್ಲಿ ಒಂದು ವಿಶೇಷ ಐತಿಹಾಸಿಕ ಸಿನಿಮಾವಾಗಿದೆ. ಈ ಸಿನಿಮಾದಲ್ಲಿ ಅನೇಕ ಐತಿಹಾಸಿಕ ಮಾಹಿತಿಗಳು ನಮಗೆ ದೊರೆಯುತ್ತವೆ. ಉದಾ: ಸ್ವಾತಂತ್ರ್ಯ ಚಳುವಳಿಯ ರೂಪುರೇಷೆ, ಅದರ ಮಹತ್ವ, ಹೋರಾಟದ ಹಿನ್ನೆಲೆ, ತಿಳುವಳಿಕೆ ಇಲ್ಲದ ಸಾಮಾನ್ಯ ಜನ, ಸ್ವಾತಂತ್ರ್ಯ ಬಂದಾಗ ಜನಸಾಮಾನ್ಯರ ಸ್ಥಿತಿ, ಇವುಗಳ ಜೊತೆಗೆ ಮಹಿಳೆಯರು ಇದ್ಯಾವುದರ ಅರಿವು ಇಲ್ಲದೆ ವಾಡೆಯಲ್ಲಿ ತಮ್ಮ ತಮ್ಮ ಕಷ್ಟ ಕಾರ್ಪಣ್ಯಗಳಲ್ಲಿ ಮುಳುಗಿದ್ದ ವಿಷಮ ಸ್ಥಿತಿಗಳನ್ನು ನಮ್ಮನ್ನು  ಅಚ್ಚರಿಗೊಳಿಸುತ್ತವೆ. ಪುರುಷ ಶಾಹಿ ಸಮಾಜ ಹೇಗೆ ಮಹಿಳೆಯರನ್ನು ತಮಗೆ ಬೇಕಾದಂತೆ ಪ್ರಾಣಿಗಳನ್ನು ಪಳಗಿಸುವಂತೆ ಪಳಗಿಸಿ ಮಹಿಳೆಯರನ್ನ ವಂಚಿಸಿದ್ದಾರೆ ಎಂಬುದು ತಿಳಿದು ಖೇದ ಉಂಟಾಗುತ್ತದೆ. ಈ ಸಿನಿಮಾದಲ್ಲಿ ಹೇಗೆ ಮಹಿಳೆಯರು ಪುರುಷ ತಂದೊಡ್ಡಿದ ಸಮಸ್ಯೆಗಳಿಗೆ ಬಲಿಯಾಗುತ್ತಾರೆ? (ರಾಧಾ ಬಾಯಿ, ಚಂದ್ರಿ ಮತ್ತು ಮಂಜರಿ) ಹಾಗೂ ತಾಯಿ ಸಾಹೇಬ ರಂತಹ ಅರಿವಿರುವ ಮಹಿಳೆ ಹೇಗೆ ತನಗೇ ಅರಿವಿಲ್ಲದಂತೆ ತನ್ನ ಸಮಸ್ಯೆಯಾಗದಿದ್ದರೂ ಮತ್ತೊಬ್ಬರ ಸಮಸ್ಯೆಗಳಿಗೆ ಸ್ಪಂದಿಸುತ್ತಾಳೆ? ಎಂಬುದು ಇನ್ನಿತರ ಮಹಿಳೆಯರಿಗೆ ದಾರಿದೀಪವಾಗುತ್ತದೆ. ಕೊನೆಗೆ ತಾಯಿ ಸಾಹೇಬಳ ಮುದುಡಿಕೊಂಡಿದ್ದ ವ್ಯಕ್ತಿತ್ವ ಕಾಲಾನುಕ್ರಮದಲ್ಲಿ ಹೇಗೆ ಅರಳುತ್ತಾ ಹೋಗುತ್ತದೆ ಸ್ವತಂತ್ರದೆಡೆಗೆ ಅವಳಿಗೆ ಅರಿವಿಲ್ಲದಂತೆ ಎಂದು ನಮಗೆ ಗೋಚರಿಸುತ್ತಾ  ಹೋಗುತ್ತದೆ. ಒಂದು ಕಡೆ ಅಸಹಾಯಕ ಹೆಣ್ಣು ಮಗಳು ಮಂಜರಿ, ತನ್ನ ಪರಿಸ್ಥಿತಿಯ ಅರಿವಿಲ್ಲದ ಚಂದ್ರ, ತನ್ನ ನಿರ್ಲಕ್ಷವನ್ನು ಅರಿಯದ ರಾಧಾಬಾಯಿಯರ ಮಾನಸಿಕ ತುಮುಲಗಳು ನಮ್ಮನ್ನು ತಲ್ಲಣ ಗೊಳಿಸುತ್ತವೆ.

**ಕೊನೆಟಿಪ್ಪಣಿಗಳು**

1. ಗೋಪಾಲಕೃಷ್ಣ ಪೈ ಮತ್ತು ಗಿರೀಶ್ ಕಾಸರವಳ್ಳಿ. (2024). *ಬಿಂಬ ಬಿಂಬನ – ಕಾಸರವಳ್ಳಿ ಚಿತ್ರಗಳ ಸಂಕಥನ.* ವೀರಲೋಕ ಬುಕ್ಸ್ ಪ್ರೈವೇಟ್ ಲಿಮಿಟೆಡ್. ಪುಟ.156
2. ರಂ.ಶಾ.ಲೋಕಾಪುರ. (1972). *ತಾಯಿ ಸಾಹೇಬ.* ಮನೋಹರ ಗ್ರಂಥಮಾಲ. ಪುಟ. 8–9

**ಪರಾಮರ್ಶನ ಗ್ರಂಥಗಳು**


- ಗಂಗಾಧರ್ ಮೊದಲಿಯಾರ್. (1998). *ಕನ್ನಡ ಸಿನಿಮಾ – ಇತಿಹಾಸ ಪುಟಗಳಲ್ಲಿ.* ಕನ್ನಡ ಪುಸ್ತಕ ಪ್ರಾಧಿಕಾರ.
- ಗಂಗಾಧರ್ ಮೊದಲಿಯಾರ್. (2001). *ಕನ್ನಡ ಚಲನಚಿತ್ರ ಇತಿಹಾಸ–ಭಾಗ–1.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಗಿರೀಶ್ ಕಾಸರವಳ್ಳಿ. (ನಿರ್ದೇಶಕರು). (1997). *ತಾಯಿ ಸಾಹೇಬ.* (ಚಲನಚಿತ್ರ).
- ಗೋಪಾಲಕೃಷ್ಣ ಪೈ ಮತ್ತು ಗಿರೀಶ್ ಕಾಸರವಳ್ಳಿ. (2024). *ಬಿಂಬ ಬಿಂಬನ – ಕಾಸರವಳ್ಳಿ ಚಿತ್ರಗಳ ಸಂಕಥನ.* ವೀರಲೋಕ ಬುಕ್ಸ್ ಪ್ರೈವೇಟ್ ಲಿಮಿಟೆಡ್.
- ಪುಟ್ಟಸ್ವಾಮಿ, ಕೆ. (2010). *ಸಿನಿಮಾ ಯಾನ.* (ಕನ್ನಡ ಚಿತ್ರರಂಗ 75–ಒಂದು ಫ್ಲ್ಯಾಶ್ ಬ್ಯಾಕ್) ಅಭಿನವ ಪ್ರಕಾಶನ.
- ರಂ.ಶಾ.ಲೋಕಾಪುರ. (1972). ತಾಯಿ ಸಾಹೇಬ, ಮನೋಹರ ಗ್ರಂಥಮಾಲ.
- Kasaravalli, G. (1998, August 3). *Tai Sahiba* wins him laurels, a clutch of awards. *India Today*. https://www.indiatoday.in *(Updated March 29, 2013)*